ಒಂದು ಅತ್ಯುತ್ತಮ ವ್ಯಾಖ್ಯಾನ ಎಂದು ವಿನಯಪೂರ್ವಕವಾಗಿ ಹೇಳಬಯಸುತ್ತೇನೆ. '...ಈಶ್ವರಚಂದ್ರ ಹಲವು ನೆಲೆಗಳಲ್ಲಿ, ಹಲವು ಪರಿಸರಗಳಲ್ಲಿ ಸಂಘರ್ಷದ ಕಾರಣ ಪರಿಣಾಮಗಳನ್ನೂ, ಸಂಘರ್ಷವನ್ನು ತಡೆಯಲು ನಡೆಯುವ ಪ್ರಯತ್ನಗಳ ಸ್ವರೂಪ ಫಲಿತಾಂಶಗಳನ್ನೂ ಶೋಧಿಸುತ್ತಾರೆ. ವ್ಯಕ್ತಿ ಜೀವನದಲ್ಲಿಯೂ, ಸಾಮಾಜಿಕ ಜೀವನದಲ್ಲಿಯೂ ಸಂಭವನೀಯವೇ ಆದ ಸಂಘರ್ಷಗಳ ನಿವಾರಣೆಗೂ ಪರಿಹಾರಕ್ಕೂ ಒದಗಿಬರುವ ಶಕ್ತಿಗಳೆಂದರೆ ಪ್ರತಿಸ್ಪರ್ಧಿಗಳ ಔದಾರ್ಯ ಹಾಗೂ ಶಾಂತಿಪ್ರಿಯ ಮೂರನೆಯವರ ಮಧ್ಯಪ್ರವೇಶ. ಪ್ರತಿಶೋಧ ಆಯೋಜಕನಿಗೂ ಅಪಾಯ ತಪ್ಪದೆನ್ನುವ ಎಚ್ಚರಿಕೆಯೂ ಈ ದಿಸೆಯಲ್ಲಿ ನೆರವಾಗಬಲ್ಲದು... ಹೀಗೆ ಗಾಢವಾಗಿ ಒಂದು ಜಟಿಲ ಜೀವನ ಸಮಸ್ಯೆಯನ್ನು ವಿಶ್ಲೇಷಿಸುವುದರೊಂದಿಗೆ ಈಶ್ವರಚಂದ್ರ ಒಂದೊಂದು ಪರಿಸರವನ್ನೂ ಸಮೃದ್ಧ ವಿವರಗಳಡೊನೆ ಪುನ ಸೃಷ್ಟಿಸುತ್ತಾರೆನ್ನುವುದೂ ಮುಖ್ಯವಾಗುತ್ತದೆ...'. 'ಹೀಗೆ ನಾಲ್ಕಾರು ಗಂಭೀರ ಶ್ರೇಷ್ಠ ಕಥೆಗಳುಳ್ಳ 'ಅದ್ವಿತೀಯ' ಒಂದು ಅತ್ಯಂತ ಗಮನಾರ್ಹ ಸಂಕಲನ' —ಎನ್ನುವ ಅವರ ಮಾತುಗಳು ಜೀವಧಾರಕ ಶಕ್ತಿಯನ್ನು ಕೊಟ್ಟಿವೆ.

ನನ್ನ ಮನಸ್ಸಿನ ಗಣಿಯಾಳದಲ್ಲಿ ಇನ್ನೂ ಅನೇಕ ಚಿನ್ನದ ರೇಖೆಗಳಿವೆ. ಉದಾಹರಣೆಗೆ, ಏಳು ವರ್ಷದ ಹಿಂದೆ ಪತ್ರಿಕೆಯಲ್ಲಿ ಬಂದ ಒಂದು ಸುದ್ದಿ: ಮುಂಬೈನ 60 ವರ್ಷ ಹಳೆಯದಾದ ಒಂದು ಕಟ್ಟಡದಲ್ಲಿ ಬಿರುಕು ಕಾಣಿಸಿಕೊಳ್ಳುತ್ತದೆ. 40 ಕುಟುಂಬಗಳನ್ನು ಹೊರಗೆ ತರುವ ಕಾರ್ಯಾಚರಣೆ ಮುಗಿದ ಕೆಲವೇ ಕ್ಷಣಗಳಲ್ಲಿ ಇಡೀ ಕಟ್ಟಡ ಕುಸಿದು ಧರೆಗುರುಳುತ್ತದೆ. ಈ ಅವಧಿಯಲ್ಲಿ ಯಾವ ಯಾವ ಫ್ಲಾಟಿನಲ್ಲಿ ಏನೆಲ್ಲಾ ಸಂಭವಿಸಿತು ಎನ್ನುವುದು ಒಂದು ಚಲನಚಿತ್ರದ ವಸ್ತುವೇ ಆಗಬಹುದು. ಹೀಗೆ ಎಷ್ಟೋ ವಸ್ತುಗಳು ನನ್ನ ಭಾವಕೋಶದಲ್ಲಿ, ಟಿಪ್ಪಣಿ ಪುಸ್ತಕದಲ್ಲಿ ಹುದುಗಿವೆ. ಯಾವಾಗ ಹೊರಬರುತ್ತವೋ ಗೊತ್ತಿಲ್ಲ.

ಈ ಕಾಲಘಟ್ಟದಲ್ಲಿ ಎಲ್ಲವೂ ವೇಗವಾಗಿ ಸಾಗುತ್ತಿವೆ. ಹೊಸ ಹೊಸ ತಂತ್ರಜ್ಞಾನ, ಹೊಸ ಹೊಸ ಮಾಧ್ಯಮಗಳು ಮತ್ತು ಹೊಸ ಹೊಸ ಸಾಧ್ಯತೆಗಳು ಜನರನ್ನು ಯಾವುದೋ ಪ್ರವಾಹದಲ್ಲಿ ಎಳೆದುಕೊಂಡು ಎತ್ತಲೋ ಸಾಗುತ್ತಿವೆ. ಅವುಗಳನ್ನೆಲ್ಲ ಅಕ್ಷರದಲ್ಲಿ ಹಿಡಿದಿಡುವ ಪ್ರಯತ್ನ ಅಷ್ಟಾಗಿ ಆಗುತ್ತಿಲ್ಲ. ಒಟ್ಟಿನಲ್ಲಿ ಸಾಹಿತ್ಯವೇ ಅವಗಣನೆಗೆ ತುತ್ತಾಗಿದೆ. ಕಾವ್ಯ, ಕಾದಂಬರಿ, ಸಣ್ಣ ಕಥೆ, ನಗೆಬರಹ ಮುಂತಾದ ಪ್ರಕಾರಗಳು ಸ್ಥಗಿತಗೊಂಡಿವೆ. ನಾಟಕ ಪ್ರಕಾರವೊಂದು ರಚನೆ ಮತ್ತು ಪ್ರಯೋಗದಲ್ಲಿ ಇನ್ನೂ ಕ್ರಿಯಾಶೀಲವಾಗಿದೆ ಎನ್ನಬಹುದು. ಇಂತಹ ಪರಿಸ್ಥಿತಿಯಲ್ಲಿ ಹೊಸ ಜೀವನದ ಸಂಕೀರ್ಣತೆಯೇ ಸಣ್ಣಕಥೆಗಳ ವಸ್ತುವಾಗಬೇಕು. ಬದಲಾಗುತ್ತಿರುವ ಮೌಲ್ಯಗಳ ಈ ಸಂದರ್ಭದಲ್ಲಿ ಹೊಸ ಮೌಲ್ಯಗಳನ್ನು ಸ್ಥಾಪಿಸಬೇಕು. ವೈಜ್ಞಾನಿಕ ಕಥೆಗಳು ವಿಪುಲವಾಗಿ ಬೆಳೆಯಲು ಅವಕಾಶವಿದೆ. ನಮ್ಮಲ್ಲೂ ಐಸಾಕ್ ಅಸಿಮೋವ್‌ಗಳು ಜನ್ಮತಳೆಯಬೇಕು. ಪತ್ತೇದಾರಿ ಕಥೆಯ ಕ್ಷೇತ್ರವೂ ಬಂಜರಾಗಿದೆ. ಕ್ರೀಡಾ ಕ್ಷೇತ್ರದ ನೋವು ನಲಿವು, ಸಾಧನೆಗಳು ಕಥೆಗಳ ವಸ್ತುವಾಗಬೇಕು. ಆಗ ಕಥಾಕ್ಷೇತ್ರಕ್ಕೆ ಹೊಸ ರಕ್ತ ಪ್ರವೇಶಿಸಿದಂತಾಗುತ್ತದೆ. ಆದರೆ ಯಾವುದೇ ವಸ್ತು ಕಥೆಯ ರೂಪ ತಾಳಲಿ, ಅದರಲ್ಲಿ ಮಾನವೀಯತೆಯ ಮೌಲ್ಯ ಸ್ಥಿರವಾಗಿರಬೇಕು. ನಮ್ಮ ಯುವ ಕಥೆಗಾರರು ಈ ಕ್ಷೇತ್ರಗಳಲ್ಲಿ ತಮ್ಮ ಲೇಖನಿಯನ್ನು ಝಳಪಿಸಬೇಕು ಎಂದು ನಾನು ಆಶಿಸುತ್ತೇನೆ.